ಪ್ರತಿಯೊಂದು ದೇಶದಲ್ಲಿ ಏನಾದರೂ ಸಾಧಿಸುವ ಅವಕಾಶಗಳೂ ಇರುತ್ತವೆ. ವಿದೇಶಗಳಲ್ಲಿರುವ ಅನೇಕರೊಂದಿಗೆ ನನ್ನ ಸಂಪರ್ಕವುಂಟಾಯಿತು; ಅವರು ಭಾರತದಿಂದ ದೂರವಿರುತ್ತಲೂ ಭಾರತಕ್ಕಾಗಿ ಸಾಕಷ್ಟು ಸಾಧನೆಯನ್ನು ಮಾಡುತ್ತಿದ್ದಾರೆ. ಅದೇ ಭಾರತದಲ್ಲಿರುವ ಅನೇಕ ಶ್ರೀಮಂತರು ಭಾರತಕ್ಕಾಗಿ ನಯಾಪೈಸೆಯನ್ನೂ ಖರ್ಚು ಮಾಡದೆ, ಪ್ರತಿಯಾಗಿ ಬಡವರನ್ನು ಶೋಷಣೆ ಮಾಡುತ್ತಿದ್ದಾರೆ.

ನಾನು ಅಮೆರಿಕದಂಥ ಶ್ರೀಮಂತ ದೇಶಗಳಲ್ಲೂ ಅನೇಕರು ದಿಕ್ಕು ದಿಶೆಗಳಲ್ಲಿದ ಜೀವನ ಸಾಗಿಸುವುದನ್ನು ನೋಡಿದ್ದೆ; ಆಫ್ರಿಕಾದಂಥ ಬಡ ದೇಶದಲ್ಲೂ ಅನೇಕರು ಸಾರ್ಥಕ ಜೀವನ ಸಾಗಿಸುವುದನ್ನೂ ನೋಡಿದೆ. ನಾವು ಎಲ್ಲಿ, ನಮ್ಮ ಎಂಥ ದಿನಚರಿಯನ್ನು ನಿರ್ಮಿಸಿಕೊಳ್ಳುತ್ತೇವೆ, ಜೊತೆಗೆ ಜೀವನವನ್ನು ಸಮಗ್ರವಾಗಿ ಸ್ವೀಕರಿಸುವ ನಮ್ಮ ದೃಷ್ಟಿಕೋನ ಎಂಥದ್ದು ಎಂಬುದು ಸಹ ನಮ್ಮನ್ನೇ ಅವಲಂಬಿಸಿದೆ.

***

ರೈಫಲ್ಸ್ ಪಾರ್ಕ್‌ನಲ್ಲಿ ಕಾರನ್ನು ಸ್ವಚ್ಛಗೊಳಿಸುವ ದಟ್ಟ ಶ್ಯಾಮ ವರ್ಣದ ಯುವಕ ಸುಕೇಶ್‌ನೆಡೆಗೆ ನನ್ನ ಗಮನ ತೀವ್ರವಾಗಿ ಹರಿಯಿತು. ಅವನು ಪ್ರತಿ ಭಾನುವಾರ ಬೆಳಿಗ್ಗೆ, ಮುಂಜಾನೆಯೇ ಮನೆಗಳ ಕಾರುಗಳ ಬೀಗದ ಕೈಗಳನ್ನು ಪಡೆದು ಬೇಸ್‌ಮೆಂಟಿನಲ್ಲಿ ನಿಂತ ಕಾರುಗಳನ್ನು ಸ್ವಚ್ಛಗೊಳಿಸುತ್ತಿದ್ದ; ನಂತರ ಮನೆಗಳಿಗೆ ಮರಳಿ ಬಂದು ಬೀಗದ ಕೈಗಳನ್ನು ಕೊಟ್ಟು ಹೋಗುತ್ತಿದ್ದ. ಅವನು ಪ್ರತಿಯಾಗಿ ಒಂದು ಕಾರಿಗೆ, ತಿಂಗಳಿಗೆ ಇನ್ನೂರು ರೂಪಾಯಿಗಳನ್ನಷ್ಟೇ ತೆಗೆದುಕೊಳ್ಳುತ್ತಿದ್ದ. ನನಗೆ ಈ ಶುಲ್ಕ ತುಂಬಾ ಕಡಿಮೆಯೆಂದು ಕಂಡಿತು, ಏಕೆಂದರೆ ಮನೆಗಳಿಂದ ಬೀಗದ ಕೈಗಳನ್ನು ತೆಗೆದುಕೊಳ್ಳುವುದು, ಕಾರುಗಳನ್ನು ಸ್ವಚ್ಛ ಮಾಡಿದ ನಂತರ ಮತ್ತೆ ಬೀಗದ ಕೈಗಳನ್ನು ಅವರವರ ಮನೆಗಳಿಗೆ ತಂದೊಪ್ಪಿಸುವುದು ಕಷ್ಟದ ಕೆಲಸವಾಗಿತ್ತು. ಒಂದು ದಿನ ನಾನೇ ಅವನಿಗೆ, 'ನಿನ್ನ ಶುಲ್ಕವನ್ನು ಹೆಚ್ಚಿಸು' ಎಂದೆ.

ಅಲ್ಲದೆ ಸುಕೇಶ್ ಬೆಳಿಗ್ಗೆ ಕಾರುಗಳ ಸ್ವಚ್ಛತೆಯ ಕೆಲಸವನ್ನು ಮಾಡಿದ ನಂತರ ಮಧ್ಯಾಹ್ನದ ವೇಳೆಯಲ್ಲಿ ಆ ಮನೆಗಳಿಂದ ಬಟ್ಟೆಗಳನ್ನು ಸಂಗ್ರಹಿಸಿ, ಅವುಗಳನ್ನು ಇಸ್ತ್ರಿ ಮಾಡಲು ತನ್ನ ಜಾಗಕ್ಕೆ ತೆಗೆದುಕೊಂಡು ಹೋಗುತ್ತಿದ್ದ. ಅವನ ಹೆಂಡತಿ ರೈಫಲ್ಸ್ ಪಾರ್ಕ್‌ನ ಮನೆಗಳಲ್ಲಿ 'ಬಾಯಿ'ಯ ಕೆಲಸವನ್ನು ಮಾಡುತ್ತಿದ್ದಳು. ಅವರ ಎರಡು ವರ್ಷದ ಮಗ ಅವರೊಂದಿಗಿರುತ್ತಿದ್ದ. ನನಗೆ ಅವರ ಬಗ್ಗೆ ಆತ್ಮೀಯತೆ ಬೆಳೆಯಿತು. ಜೀವನ ನಿರ್ವಹಣೆಗಾಗಿ ಸಂಘರ್ಷಿಸುತ್ತಿದ್ದಾಗ್ಯೂ ಆ ಕುಟುಂಬ ಸಂತಸದಲ್ಲಿದ್ದಂತೆ ತೋರುತ್ತಿತ್ತು. ನಾನು ಅವರ ಮಗನಿಗೆ ನೀಲ್ ಒಂದೆರಡು ಬಾರಿ ಉಪಯೋಗಿಸಿದ್ದ ಅನೇಕ ಹಳೆಯ ಉಡುಪುಗಳನ್ನು ಕೊಟ್ಟೆ. ಮಗ ತಂದೆಯೊಂದಿಗೆ ನಮ್ಮ ಮನೆಗೆ ಬಂದಾಗ ಅವನಿಗೆ ಚಾಕೊಲೇಟ್‌ಗಳನ್ನು ಕೊಡುತ್ತಿದ್ದೆ. ಒಮ್ಮೊಮ್ಮೆ ಬಿಸ್ಕತ್ತಿನ ಡಬ್ಬಿಯನ್ನೇ ಕೊಟ್ಟುಬಿಡುತ್ತಿದ್ದೆ.

'ಆಂಟಿಗೆ ಥ್ಯಾಂಕ್ಯೂ ಹೇಳು' ಸುಕೇಶ್ ತನ್ನ ಮಗನಿಗೆ ಹೀಗೆ ಹೇಳುವುದನ್ನು ಕಲಿಸುತ್ತಿದ್ದ.

ನಾನು ಹೇಳಿದ ನಂತರ ಸುಕೇಶ್ ತನ್ನ ಶುಲ್ಕವನ್ನು ಇನ್ನೂರಾ ಐವತ್ತು ರೂಪಾಯಿಗಳಿಗೆ ಹೆಚ್ಚಿಸಿದ. ಈ ಸಾಮಾನ್ಯ ಹೆಚ್ಚಳಕ್ಕೆ ಸೊಸೈಟಿಯಲ್ಲಿ ಗದ್ದಲವುಂಟಾಯಿತು. ವಿದೇಶದಲ್ಲಿದ್ದು ಬಂದವರು ವಾದಿಸಲಿಲ್ಲ, ಏಕೆಂದರೆ ಅವರು ವಿದೇಶಿ ನೆಲದಲ್ಲಿ ಜೀವನವನ್ನು ಸಾಗಿಸಿ ಶ್ರಮದ ಬೆಲೆಯನ್ನು ಅರಿತಿದ್ದರು. ಉಳಿದಂತೆ ಹೆಚ್ಚು ಶ್ರೀಮಂತರಾದವರು ಹೆಚ್ಚು ವಿರೋಧಿಸುತ್ತಿದ್ದರು; ಆದರೆ ಈ ಲಗ್ಷುರಿ ಕಾಂಪ್ಲೆಕ್ಸ್‌ನಲ್ಲಿ ವಾಸಿಸುವವರು ದುಬಾರಿ ಕಾರುಗಳಲ್ಲಿ ಓಡಾಡುತ್ತಿದ್ದರು. ಮಾಲ್‌ಗೆ ಹೋಗಿ ಒಂದು ದಿನಕ್ಕೆ ಸಾವಿರಾರು ರೂಪಾಯಿಗಳನ್ನು ಉಡಾಯಿಸುತ್ತಿದ್ದರು. ಆ ಬಡಪಾಯಿ ಹೆಚ್ಚಿಸಿದ ಅಲ್ಪಪ್ರಮಾಣದ ಶುಲ್ಕಕ್ಕೆ ಆಕಾಶವೇ ಕಳಚಿ ಬಿದ್ದಂತೆ ವರ್ತಿಸಿದರು.

ಅಂದು ಸಂಜೆ ಸುಕೇಶ್ ನಮ್ಮ ಮನೆಗೆ ಬಟ್ಟೆಗಳನ್ನು ತೆಗೆದುಕೊಂಡು ಹೋಗಲು ಬಂದಾಗ ನಿರಾಸೆಯಿಂದ ಹೇಳಿದ, 'ಆರ್.ಡಬ್ಲ್ಯೂ.ಎ. ಸೆಕ್ರೆಟರಿಗೆ ನನ್ನ ಬಗ್ಗೆ ದೂರು ಹೋಗಿದೆ. ಈ ಜನ ನನ್ನ ಶುಲ್ಕವನ್ನು ಹೆಚ್ಚಿಸಲು ಬಿಡಲಿಲ್ಲ. ಒಂದು ವೇಳೆ ಹೆಚ್ಚು ಮಾತನಾಡಿದರೆ, ನೀನು ಮತ್ತು ನಿನ್ನ ಹೆಂಡತಿ, ಈ ಸೊಸೈಟಿ ಒಳಗೆ ಬರುವುದನ್ನು ನಿಲ್ಲಿಸುತ್ತೇವೆ ಎಂದು ನನಗೆ ಗದರಿಸಿದರು. ನಿಮ್ಮ ಪಕ್ಕದ ಮನೆಯವರು ಹೆಚ್ಚು ಅಡ್ಡಿಪಡಿಸಿದರು.'

'ವಜ್ರದ ವ್ಯಾಪಾರಿಗಳೇ?'

ಅವನು ಮಾತನಾಡಲಿಲ್ಲ. ಅವನ ಕಣ್ಣುಗಳು ತುಂಬಿ ಬಂದವು. ನನ್ನ ಹೃದಯ ಕರಗಿತು. ವಜ್ರದ ವ್ಯಾಪಾರಿ ರೋಶನ್ ಲಾಲರ ಮನೆಯಲ್ಲಿ ಮೂರು ಕಾರುಗಳಿದ್ದವು; ಒಂದು ಅವರಿಗೆ, ಇನ್ನೊಂದು ಮಗನಿಗೆ, ಮೂರನೆಯದು ಸೊಸೆಗೆ... ಅವರ ಮನೆಯಲ್ಲಿ ಸಂಪಾದನೆಯನ್ನು ಮಾಡುವ ಸದಸ್ಯರು ಸಹ ಹೆಚ್ಚಿದ್ದರು. ಸುಕೇಶ್ ಐವತ್ತು ರೂಪಾಯಿ ಹೆಚ್ಚಿಸಿದ್ದಕ್ಕೆ ಅತಿ ಹೆಚ್ಚು ಗಲಾಟೆಯನ್ನು ಅವರ ಕುಟುಂಬ ಮಾಡಿತು. ಓಹ್! ಅದೊಂದು ದಿನ ಸೊಸೈಟಿಯ ಮೀಟಿಂಗ್‌ನಲ್ಲಿ ರೋಶನ್ ಲಾಲರು ನಮ್ಮ ಮೇಲೆ ಆರೋಪವನ್ನು ಹೊರಿಸಿದರು, 'ನೀವಿಲ್ಲಿಗೆ ಬಂದು ರೇಟನ್ನು ಹಾಳು ಮಾಡುತ್ತಿದ್ದೀರ. ನೀವು ಎಲ್ಲಿಂದ ಬಂದಿದ್ದೀರೋ, ಅಲ್ಲಿಗೇ ಹೋಗಿಬಿಡಿ.'

ಇದನ್ನೆಲ್ಲಾ ಗಮನಿಸುತ್ತಿದ್ದ ಮಾರ್ಕೋ ನನ್ನನ್ನು ಕೇಳಿದ, 'ಇಲ್ಲಿ ಕನಿಷ್ಠ ಕೂಲಿ ಏನಿದೆ?'

'ಇಲ್ಲಿ ಕನಿಷ್ಠ ಕೂಲಿ ಇಲ್ಲ' ಎಂದೆ ನಾನು.

ನಾವೇನು ಹೇಳುವುದು? ವೈಯಕ್ತಿಕವಾಗಿ ರೋಶನ್ ಲಾಲರೊಂದಿಗೆ ನಮ್ಮ ಸಂಬಂಧ ಉತ್ತಮವಾಗಿತ್ತು. ಅವರು ನಮ್ಮ ಒಳ್ಳೆಯ ನೆರೆಮನೆಯವರಾಗಿದ್ದರು. ರೋಶನ್ ಲಾಲರು ತುಂಬಾ ಉದಾರಿಗಳಾಗಿ ತೋರುತ್ತಾರೆ, ನಮ್ಮ ಸಹಾಯಕ್ಕೆ ಸದಾ ಬರುತ್ತಾರೆ, ಶ್ರೀಮಂತರಾದ ಅವರು ಒಬ್ಬ ಬಡವ ಐವತ್ತು ರೂಪಾಯಿಗಳನ್ನು ಹೆಚ್ಚಿಸಿದ್ದಕ್ಕೆ ಅಷ್ಟೊಂದು ವಿರೋಧವನ್ನೇಕೆ ವ್ಯಕ್ತಪಡಿಸುತ್ತಿದ್ದಾರೆ ಎಂಬುದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಆದರೆ ನನಗೆ ಕೆಲವು ಪ್ರಶ್ನೆಗಳಿಗೆ ಇನ್ನೂ ಉತ್ತರ ಸಿಕ್ಕಿಲ್ಲ.

ನಾನು ಅವರಿಗೆ ವೈಯಕ್ತಿಕವಾಗಿ ಏನೂ ಹೇಳಲಿಲ್ಲ. ಆದರೆ ಮುಂದಿನ ಆರ್.ಡಬ್ಲ್ಯೂ.ಎ. ಜನರಲ್ ಮೀಟಿಂಗ್‌ನಲ್ಲಿ ಎಲ್ಲರೆದುರು, ಕಾರು ತೊಳೆಯುವ ಸುಕೇಶ್‌ನಿಗೆ ಕಡಿಮೆ ಹಣ ಕೊಡಲಾಗುತ್ತಿದೆ ಎಂಬ ಪ್ರಸ್ತಾವವನ್ನಿಟ್ಟೆ.

ವಜ್ರದ ವ್ಯಾಪಾರಿಗಳು ರೇಗಿದರು, ಅವರು ನನ್ನ ವಿರುದ್ಧ ಯುದ್ಧ ಸಾರಿದರು, 'ಇದು ಕಡಿಮೆ ಮತ್ತು ಹೆಚ್ಚಿನ ವಿಷಯವಲ್ಲ. ಇದು ರೇಟ್ ಬಗೆಗಿನ ವಿಷಯವಾಗಿದೆ. ಇಲ್ಲಿ ಸುಕೇಶ್ ಮಾತ್ರ ವಾಹನಗಳನ್ನು ತೊಳೆಯುವುದಿಲ್ಲ, ಎಂಟು ಜನ ಹುಡುಗರೂ ವಾಹನಗಳನ್ನು ತೊಳೆಯುತ್ತಾರೆ. ವಾಹನ ತೊಳೆಯುವ ಎಲ್ಲರಿಗೂ ಒಂದೇ ರೇಟಿದೆ. ಒಂದು ವೇಳೆ ಸುಕೇಶ್‌ನ ರೇಟು ಹೆಚ್ಚಿಸಿದರೆ, ಎಲ್ಲರಿಗೂ ಹೆಚ್ಚಿಸಬೇಕಾಗುವುದು.'

'ಎಲ್ಲರಿಗೂ ಹೆಚ್ಚಿಸಿ. ಅವರಿಗೆ ಕಡಿಮೆ ಹಣ ಕೊಡಲಾಗುತ್ತಿದೆ ಎಂದು ನಿಮಗೆ ಅನ್ನಿಸುವುದಿಲ್ಲವೇ? ಮುಂಜಾನೆಯೇ ಮೊದಲ ಅಂತಸ್ತಿನಿಂದ ಹಿಡಿದು ಏಳನೆಯ ಅಂತಸ್ತಿನವರೆಗಿನ ಮನೆಗಳಿಂದ ಬೀಗದ ಕೈಗಳನ್ನು ಸಂಗ್ರಹಿಸಿ, ಕೆಳಗಿನ ಬೇಸ್‌ಮೆಂಟಿಗೆ ಹೋಗಿ ಕೊಳಕು ವಾಹನಗಳನ್ನು ತೊಳೆಯುವುದು, ನಂತರ ಬೀಗದ ಕೈಗಳನ್ನು ಕೊಡಲು ಎಲ್ಲಾ ಮನೆಗಳಿಗೂ ಮತ್ತೆ ಹೋಗುವುದು... ಇದು ಶ್ರಮದ ಕೆಲಸ' ಎಂದೆ ನಾನು.

ನನ್ನ ಮಾತಿಗೆ ಮೂರ್ನಾಲ್ಕು ಜನ ಧ್ವನಿಗೂಡಿಸಿದರು, ನಂತರ ವಜ್ರದ ವ್ಯಾಪಾರಿಗಳು ನನ್ನ ಮೇಲೆ ಮತ್ತೂ ಕೆಂಡಕಾರಿದರು. ಅವರು ಕೈಗಳನ್ನು ಮೇಲೆತ್ತಿ ಹೇಳಿದರು, 'ನೀವು ಎಲ್ಲಿಂದ ಬಂದಿದ್ದೀರೋ, ಅಲ್ಲಿಗೇ ಮರಳಿ ಹೋಗಿ. ಇಲ್ಲಿ ನೀವು ನಮ್ಮ ರೇಟನ್ನು ಹಾಳು ಮಾಡುತ್ತಿದ್ದೀರಿ.'

ಆದರೂ ಸುಕೇಶನ ರೇಟ್ ಹೆಚ್ಚಲಿಲ್ಲ. ಆದರೆ ವಜ್ರ ವ್ಯಾಪಾರಿಗಳಾದ ರೋಶನ್ ಲಾಲರೊಂದಿಗಿದ್ದ ನಮ್ಮ ಸಂಬಂಧ ಬಿಗಡಾಯಿಸಿತು. ಅವರ ಇಡೀ ಪರಿವಾರ ನನ್ನನ್ನು ತಿರಸ್ಕಾರದಿಂದ ನೋಡಲಾರಂಭಿಸಿತು. ಅವರ ಮೊಮ್ಮಗ ಸಹ ನೀಲ್‌ನೊಂದಿಗೆ ಆಟವಾಡುವುದನ್ನು ನಿಲ್ಲಿಸಿದ.

***

ಇಲ್ಲಿಗೆ ಬಂದಾಗಿನಿಂದ ಮನೆಗೆ ಹೋಗಬೇಕು ಎಂಬ ಯೋಚನೆ ಮನಸ್ಸಿನಲ್ಲಿ ಕಾಡುತ್ತಿತ್ತು. ಆದರೆ ಯಾವ ಮನೆಗೆ ಹೋಗುವುದು? ಅಪ್ಪ ನಿಧನರಾಗಿ ಆರು ವರ್ಷಗಳಾಗಿತ್ತು. ಅವರ ಮನೆ ಸಹ ಮಾರಾಟವಾಯಿತು; ಹಣದ ಮೂರನೆಯ ಒಂದು ಭಾಗ ನನಗೂ ಲಭಿಸಿತ್ತು. ಹೌದು, ನಾನು ನನ್ನ ಸಂಬಂಧಿಕರು ಮತ್ತು ಹಳೆಯ ಸ್ನೇಹಿತರನ್ನು ಭೇಟಿಯಾಗಬೇಕು. ವಿದೇಶದಲ್ಲಿದ್ದಾಗ ನಮ್ಮವರಿಲ್ಲದ ದುಃಖ ಸದಾ ಕಾಡಿಸುತ್ತಿತ್ತು. ತಮ್ಮ ದೇಶದಲ್ಲಿ ಕಳೆದ ಸಮಯವನ್ನು ನೆನಪಿಸಿಕೊಳ್ಳುವ, ತಮ್ಮವರನ್ನು ಭೇಟಿಯಾಗಲು ಬಯಸುವ, ಆದರೆ ಭಾರತಕ್ಕೆ ಮರಳಿ ಹೋಗಿ, ಭಾರತದಲ್ಲಿ ನೆಲೆಸುವ ಯೋಚನೆ ಬರದವರಲ್ಲಿ ನಾನೂ ಒಬ್ಬಳಾಗಿದ್ದೆ.